# ಕ್ರಿಯೇಟಿವ್ ಕರ್ಣಾಭರಣ



**ಬಟ್ಟಲುಗಣ್ಣುಗಳ ವರ್ಣನೆಯನ್ನು ಕೇಳಿದ್ದ ನನಗೆ ಬಟ್ಟಲು ಕಿವಿಗಳನ್ನು ನೋಡುವ ಭಾಗ್ಯ ಲಭಿಸಿತು. ಕೊನೆಯ ಬಾರಿಗೆ ನನ್ನ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಿ ಜುಮುಕಿಯೊಂದಿಗಿನ ನನ್ನ ನಿವೃತ್ತಿಯನ್ನು ಘೋಷಿಸಿದೆ.**

**■ ಸುಮಾ ರಮೇಶ್**

ಕಲೆ: ಈಶ್ವರ ಬಡಿಗೇರ

ಗೆಳತಿಯ ಮಗಳ ಮದುವೆಗೆ ತಯಾರಾಗುತ್ತಿದ್ದೆ. ಬಹಳ ದಿನಗಳ ನಂತರ ದೊಡ್ಡದೊಂದು ಜುಮುಕಿಯನ್ನು ಧರಿಸುವ ಮನಸ್ಸಾಯಿತು. ಇಪ್ಪತ್ತೈದು ಗ್ರಾಂನ ಹರಳಿನ ಜುಮುಕಿಯನ್ನು ಧರಿಸಿ ಕನ್ನಡಿಯಲ್ಲಿ ಇಣುಕಿದೆ. ಏನೋ ಎಡವಟ್ಟಾದಂತೆನಿಸಿತು. ಮತ್ತೊಮ್ಮೆ ಸರಿಯಾದ ಪೋಸ್ಚರ್‌ನಲ್ಲಿ ನಿಂತು ಗಮನಿಸಿದೆ. ನೋ ಡೌಟ್, ಜುಮುಕಿಗಳೆರಡೂ ಮೊದಲಿಗಿಂತಲೂ ಉದ್ದ ಆಗಿವೆ!

ಓಹ್! ಇದ್ಯಾವಾಗ ಕೊಂಡಿ ಇಷ್ಟೊಂದು ಜಗ್ಗಿತು? ಇಟ್ಟಿದ್ದಲ್ಲೇ ಇಟ್ಟಿದ್ದೆನಲ್ಲಾ ಎಂದುಕೊಳ್ಳುತ್ತಾ ಡೌಟ್ ಕ್ಲಿಯರ್ ಮಾಡಿಕೊಳ್ಳಲು ಮಗಳ ಬಳಿ ಹೋದೆ. 'ಅಮ್ಮಾ, ಜಗ್ಗಿರೋದು ಕೊಂಡಿ ಅಲ್ಲ, ನಿನ್ನ ಕಿವಿ' ಎಂದಳು ಮಗಳು ನಗುತ್ತಾ. ಗಲಿಬಿಲಿಗೊಂಡ ನಾನು ಮತ್ತೆ ಮಿರರ್ ಮುಂದೆ ನಿಂತು ನನ್ನ ಪ್ರತಿಬಿಂಬವನ್ನು ಸ್ಕ್ಯಾನ್ ಮಾಡಿದೆ. ತುಂಬಿದ ಬಿಂದಿಗೆಯನ್ನು ಹೊರಲಾರದೆ ಮುದುಕಿಯ ಕಾಯ ಓಲಾಡಿದಂತೆ ನನ್ನ ಕಿವಿಗಳೆರಡೂ ಜುಮುಕಿಯ ತೂಕವನ್ನು ತಾಳಲಾರದೆ ತೊನೆದಾಡುತ್ತಿದ್ದವು. ಮೂಗಿಗಿಂತ ಮೂಗುತಿಯೇ ಭಾರ ಎಂಬಂತೆ ಕಿವಿಗಿಂತ ಕಿವಿಯಾಭರಣವೇ ಭಾರ ಎಂಬಂತಾಯಿತು. ಜುಮುಕಿಯ ತೂಕಕ್ಕೆ ರಬ್ಬರ್‌ನಂತೆ ಎಕ್ಸ್‌ಪಾಂಡ್ ಆಗುತ್ತಿದ್ದ ನನ್ನ ಕಿವಿಯಾಲೆಗಳು ನನ್ನ ಯೌವನದ ದಿನಗಳು ಮುಗಿದು ವೃದ್ಧಾಪ್ಯದ ಹೊಸ್ತಿಲಿಗೆ ಸೇರುಒದ್ದು ಸಾಗಬೇಕೆಂಬುದನ್ನು ಸೂಚಿಸುತ್ತಿದ್ದವು.

ಗಗನಚುಂಬಿ ಕಟ್ಟಡಗಳಂತೆ ಹೆಗಲಚುಂಬಿ ಲೋಲಾಕುಗಳನ್ನೆಲ್ಲಾ ಧರಿಸಿ ಮೆರೆದಿದ್ದ ನನ್ನ ಶ್ರವಣೇಂದ್ರಿಯಗಳು ಇನ್ನು ಕೋಡುಬಳೆ, ಚಕ್ಕುಲಿ, ಕಾಲುಬಳೆಯಂತ ಕರ್ಣಿಕೆಗಳನ್ನು ಮರೆತು ಕೇವಲ ಪೆಪ್ಪರ್‌ಮೆಂಟಿನಂತಹ ಪುಟ್ಟ ಡಯಾಮೀಟರ್‌ನ ಓಲೆಗಳನ್ನಷ್ಟೇ ಧರಿಸಿ ತೃಪ್ತಿಪಡಬೇಕೆಂದು ನೆನೆದು ನೋವಾಯಿತು. ಸಂಜೆಯ ವಾಯುವಿಹಾರದಲ್ಲಿ ನನ್ನ ಸಮಾನ ವಯಸ್ಕರೊಂದಿಗೆ ಈ ವಿಷಯವನ್ನು ಚರ್ಚಿಸಿದಾಗ ಎಲ್ಲರಿಗೂ ಈ ಸಮಸ್ಯೆ ಇದ್ದು, ಅವರು ಅದಕ್ಕೆ ಸಾಕಷ್ಟು ರೆಮಿಡೀಸ್ ಕಂಡುಕೊಂಡಿರುವುದಾಗಿ ತಿಳಿಸಿದರು. ನಾಲ್ಕಾರು ಗೆಳತಿಯರು ನೀಡಿದ ಹತ್ತಾರು ರೆಮಿಡೀಸ್‌ನಲ್ಲಿ ಪ್ರತಿದಿನ ಮನೆಯಲ್ಲಿ ಓಲೆಯನ್ನೇ ಧರಿಸದಿರುವುದು ಅತೀ ಮುಖ್ಯವಾದ ಅಂಶವಾಗಿತ್ತು. ಅದರಂತೆ ನೊಗ ಹೊತ್ತು ನಿಷ್ಠೆಯಿಂದ ದುಡಿದ ಎತ್ತುಗಳಿಗೆ ವಿರಾಮ ನೀಡಿ ಬಿಡುಗಡೆಗೊಳಿಸಿದಂತೆ ನನ್ನ ಕರ್ಣಿಕೆಗಳನ್ನು ಕಳಚಿ ಕಿವಿಗಳಿಗೆ ತಾತ್ಕಾಲಿಕ ವಿರಾಮ ನೀಡಿದೆ.

ತಿಂಗಳುಗಟ್ಟಲೆ ಓಲೆ ಧರಿಸದಿದ್ದರೂ ನನ್ನ ಕಿವಿಯ ತೊಗಲಿನಲ್ಲಿ ಅಂತಹಾ ಸ್ಟಿಫ್‌ನೆಸ್ ಏನೂ ಕಾಣಲಿಲ್ಲ. ಬಹುಶಃ ರಂಧ್ರ ದೊಡ್ಡದಾಗಿ ಇನ್ನೂ ಹೆಚ್ಚಿನ ಹಾನಿಯಾಗುವುದನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಿರಬಹುದು. ಆದರೂ ದೊಡ್ಡ ಜುಮುಕಿಯನ್ನು ಮೊದಲಿನಂತೆ ಧರಿಸುವ ನನ್ನ ಕನಸು ನನಸಾಗುವ ಲಕ್ಷಣ ಕಾಣಲಿಲ್ಲ.

ಒಮ್ಮೆ ಯೂಟ್ಯೂಬ್‌ನಲ್ಲಿ ಇದಕ್ಕೆ ಸಂಬಂಧಪಟ್ಟ ಒಂದು ವಿಡಿಯೊದಲ್ಲಿ ಬ್ಯಾಂಡೇಡಿನಿಂದ ಇದಕ್ಕೆ ಪರಿಹಾರ ಇರುವುದೆಂದು ತಿಳಿಯಿತು. ಸರಿ... ಅದರಂತೆ ಮೆಡಿಕಲ್ ಶಾಪ್‌ನಿಂದ ಬ್ಯಾಂಡೇಡ್ ತಂದೆ. ಅವರ ಸೂಚನೆಯಂತೆ ಅದರ ಮಧ್ಯ ಭಾಗವನ್ನು ಕತ್ತರಿಸಿ ಎಸೆದು, ಸೈಡಿನ ಭಾಗವನ್ನು ನನ್ನ ಕಿವಿಯ ಆಲೆಯ ಅಳತೆಗೆ ವೃತ್ತಾಕಾರವಾಗಿ ಕತ್ತರಿಸಿದೆ. ಅದನ್ನು ನನ್ನ ಕಿವಿಯ ಹಿಂಭಾಗಕ್ಕೆ ಅಂಟಿಸಿ ಒಂದು ಸೂಜಿಯನ್ನು ಕಿವಿಯ ಹೋಲ್‌ನಿಂದ ತೂರಿಸಿ ಅಂಟಿದ್ದ ಬ್ಯಾಂಡೇಡಿಗೂ ಒಂದು ಹೋಲ್ ಮಾಡಿದೆ. ಶೈಶವಾವಸ್ಥೆಯಲ್ಲಿ